# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಬಿಡಿ/2352/2021
ಪಿಓ.ಎ.ಆರ್.ಇ-5

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ ವೀಧಿ,
ಬೆಂಗಳೂರು_ದಿನಾಂಕ :26/04/2022

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ: ಶ್ರೀ ಗಿರೀಶ್ ವಿ ಬಿನ್ ವೆಂಕಟಚಲಯ್ಯ, ಬಿಲ್ ಕಲೆಕ್ಟರ್, ಬನ್ನಿಕುಪ್ಪೆ ಗ್ರಾಮ ಪಂಚಾಯ್ತಿ, ಕೈಲಾಂಚ ಹೋಬಳಿ, ರಾಮನಗರ ತಾಲ್ಲೂಕು & ಜಿಲ್ಲೆ.**

ಆದ ನೀವು ಸರ್ಕಾರಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ದುರ್ನಡತೆ ತೋರಿದ ಕುರಿತಂತೆ ನಿಮ್ಮ ಮೇಲೆ ಶಿಸ್ತುಕ್ರಮ ಜರುಗಿಸುವ ಬಗ್ಗೆ.

****

1. ಆರಕ್ಷಕ ನಿರೀಕ್ಷಕರು ಭ್ರಷ್ಟಾಚಾರ ನಿಗ್ರಹ ದಳ ಪೋಲಿಸ್ ಠಾಣೆ ರಾಮನಗರ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ **ಶ್ರೀ. ಗಿರೀಶ್ ವಿ ಬಿನ್ ವೆಂಕಟಚಲಯ್ಯ, ಬಿಲ್ ಕಲೆಕ್ಟರ್, ಬನ್ನಿಕುಪ್ಪೆ ಗ್ರಾಮ ಪಂಚಾಯ್ತಿ, ಕೈಲಾಂಚ ಹೋಬಳಿ, ರಾಮನಗರ ತಾಲ್ಲೂಕು & ಜಿಲ್ಲೆ.** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ **ಕೆ. ಮಲ್ಲೇಶ್, ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆ, ರಾಮನಗರ.** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ಎದುರುದಾರರು ಬನ್ನಿಕುಪ್ಪೆ ಗ್ರಾಮ ಪಂಚಾಯತಿಯಲ್ಲಿ ಜವಾನ ಹುದ್ದೆಗೆ ದಿ: 15/01/2005 ನೇಮಕಾತಿ ಹೊಂದಿ ನಂತರ ದಿ: 08/07/2005 ರಲ್ಲಿ ಬಿಲ್ ಕಲೆಕ್ಟರ್ ಆಗಿ ಬಡ್ತಿ ಹೊಂದಿ, ಕರ್ತವ್ಯ ನಿರ್ವಹಿಸುವ ಕಾಲಕ್ಕೆ ತಮಗಿರುವ ಆದಾಯಕ್ಕಿಂತ ಸುಮಾರು 582% ನಷ್ಟು ಅಸಮತೋಲನ ಆಸ್ತಿಯನ್ನು ತನ್ನ ಹಾಗೂ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿ ಹೊಂದಿದ ಬಗ್ಗೆ ಬರೆದುಕೊಂಡಿದ್ದು, ಸದರಿ ದೂರು ದಿ: 05/12/2016 ರಂದು ರಾಮನಗರ ಎ.ಸಿ.ಬಿ ಪೋಲಿಸ್ ಠಾಣಾ ಗುನ್ನಾ ನಂ.05/2016ರಲ್ಲಿ ದಾಖಲಾಗಿದ್ದು, ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 13(1)(e) ರೆ/ವಿ 13(2) ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ ಎದುರುದಾರರಾದ ನೀವು ಸರ್ಕಾರಿ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ಅಕ್ರಮ ಆಸ್ತಿಯನ್ನು ಸಂಪಾದಿಸಿ ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು-02 ಇವರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

ಕಂಪ್ಲೆಂಟ್/ಉಪಲೋಕ್/ಬಿಡಿ/2352/2021
ಪಿಓ.ಎ.ಆರ್.ಇ-5

2. **ಎದುರುದಾರರ ಮೇಲಿನ ಆಪಾದನೆಯ ಸಂಕ್ಷಿಪ್ತ ಸಾರಾಂಶ:**

i. ದೂರುದಾರರಾದ **ಕೆ. ಮಲ್ಲೇಶ್, ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆ, ರಾಮನಗರ.** ಇವರು ಎದುರುದಾರರ ವಿರುದ್ಧ ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ಎದುರುದಾರರು ದಿ: 15/01/2005 ರಂದು ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಬನ್ನಿಕುಪ್ಪೆ ಗ್ರಾಮ ಪಂಚಾಯತಿಯಲ್ಲಿ ಜವಾನ ಹುದ್ದೆಗೆ ನೇಮಕಾತಿ ಹೊಂದಿ, ದಿ: 08/07/2005 ರಲ್ಲಿ ಬಿಲ್ ಕಲೆಕ್ಟರ್ ಆಗಿ ಬಡ್ತಿ ಹೊಂದಿದ್ದು, ತಮ್ಮ ಸೇವಾ ಅವಧಿಯಲ್ಲಿ ಬಲ್ಲ ಮೂಲಗಳ ಆದಾಯಕ್ಕಿಂತ ಹೆಚ್ಚಿನ ಸ್ಥಿರ ಹಾಗೂ ಚರ ಆಸ್ತಿಗಳನ್ನು ತಮ್ಮ ಹಾಗೂ ಪತ್ನಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿ ಹೊಂದಿರುವ ಬಗ್ಗೆ ಮಾಹಿತಿಯಿದ್ದ ಮೇರೆಗೆ ಎದುರುದಾರರ (ಪರಿಶೀಲನಾ ಅವಧಿಯನ್ನು) ಚೆಕ್ ಪಿರಿಯಡ್‌ನ್ನು ಸದರಿಯವರು ಸೇವೆಗೆ ಸೇರಿದಾಗಿನಿಂದ ಅಂದರೆ, ದಿ: 15/01/2005 ರಿಂದ ಅಕ್ಟೋಬರ್ 2016 ರವರೆಗೆ ಪರಿಗಣಿಸಿ, ಮಾಹಿತಿ ಸಂಗ್ರಹಿಸಲಾಗಿ ಎದುರುದಾರರು 582% ಅಸಮತೋಲನ ಆಸ್ತಿಯನ್ನು ಮೇಲ್ಕಂಡ ಚೆಕ್ ಅವಧಿಯಲ್ಲಿ ಅರ್ಜಿಸಿದ ಬಗ್ಗೆ ದೂರುದಾರರು ದೂರು ಸಲ್ಲಿಸಿರುತ್ತಾರೆ.

ii. ತನಿಖಾ ಕಾಲದಲ್ಲಿ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1. ಸತೀಶ್ ಬಿನ್ ಕಾಳೇಗೌಡ 2. ವಿ. ಧನ್ಯಕುಮಾರ್ ಬಿನ್ ವಿಷಕಂಠೇಗೌಡ ಇವರುಗಳನ್ನು ಬರಮಾಡಿಕೊಂಡು ಸದರಿಯವರ ಸಮಕ್ಷಮ ಬನ್ನಿಕುಪ್ಪೆ ಗ್ರಾಮದಲ್ಲಿರುವ ಎದುರುದಾರರ ಮನೆಯನ್ನು ದಿ: 06/12/2016 ರಂದು ಬೆಳಿಗ್ಗೆ 6:10 ಗಂಟೆಯಿಂದ ಶೋಧನೆ ಮಾಡಿ, ಕಡತ-1, ಕಡತ-2 ಹಾಗೂ ಕಡತ-3 ಇವುಗಳನ್ನು ಅಮಾನತ್ತುಪಡಿಸಿಕೊಂಡು ಮನೆಯಲ್ಲಿ ದೊರೆತ ಚರಾಸ್ತಿಗಳ ಕುರಿತಂತೆ ವಿವರವಾಗಿ ಬರೆದ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

iii. ಅದೇ ದಿನ ಅಂದರೆ 06/12/2016 ರಂದು ಎದುರುದಾರರು ಕರ್ತವ್ಯ ನಿರ್ವಹಿಸುತ್ತಿರುವ ಗ್ರಾಮ ಪಂಚಾಯತಿ ಕಾರ್ಯಾಲಯದಲ್ಲಿ ಎದುರುದಾರರ ಕೆಲಸ ಮಾಡುತ್ತಿರುವ ಕೊಠಡಿಯನ್ನು ಪಂಚರಾದ 1. ಎಂ.ಸಿ. ಕುಮಾರ 2. ರಾಮಮೂರ್ತಿ ಇವರುಗಳ ಸಮಕ್ಷಮ ಶೋಧನೆ ಮಾಡಿ, ಕೆಲವೊಂದು ದಾಖಲಾತಿಗಳನ್ನು ಅಮಾನತ್ತುಪಡಿಸಿಕೊಂಡು, ಆ ಬಗ್ಗೆ ವಿವರವಾಗಿ ಬರೆದ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

3. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷಿದಾರರ ಹೇಳಿಕೆಗಳನ್ನು ಪರಿಗಣಿಸಲಾಗಿ ಎದುರುದಾರರು ಈ ಕೆಳಕಂಡ ಚರ ಹಾಗೂ ಸ್ಥಿರ ಆಸ್ತಿಗಳನ್ನು ತಮ್ಮ ಹಾಗೂ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿ ಅಕ್ರಮವಾಗಿ ಸಂಪಾದಿಸಿರುವುದು ಕಂಡುಬರುತ್ತದೆ.

4. **<u>ಪರಿಶೀಲನಾ ಅವಧಿಯಲ್ಲಿ ಎದುರುದಾರರು ಗಳಿಸಿರುವ ಆಸ್ತಿಯ ವಿವರಗಳು:</u>**

| ಕ್ರಸಂ | ಆಸ್ತಿಯ ವಿವರಗಳು | ಮೌಲ್ಯ |
|---|---|---|
| 1 | <u>ಸ್ಥಿರಾಸ್ತಿಗಳು : (ಕಟ್ಟಡ, ನಿವೇಶನ, ಇತರೆ)</u> | 60,000-00 |

| | | |
|---|---|---|
| | ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿರುವ ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಬನ್ನಿಕುಪ್ಪೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ನಿವೇಶನ ಇದರ ಖಾನೇಷುಮಾರಿ ಸಂಖ್ಯೆ: 231/182, ಇದರ ಅಳತೆ 50 x 80 ಅಡಿಗಳು. | |
| 2 | ಎದುರುದಾರರ ವಾಸದ ಕಟ್ಟಡದ ಮೌಲ್ಯ<br>ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ರವರ ಹೆಸರಿನಲ್ಲಿ ಬನ್ನಿಕುಪ್ಪೆ ಗ್ರಾಮದಲ್ಲಿರುವ ಡೂಪ್ಲೆಕ್ಸ್ ಮನೆಯ ಕಟ್ಟಡದ ಮೌಲ್ಯ. (ಮನೆ ಖಾತಾ ಸಂಖ್ಯೆ: 231/182) | 32,12,417-00 |
| 3 | ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ರವರ ಹೆಸರಿನಲ್ಲಿರುವ ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಬನ್ನಿಕುಪ್ಪೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಖಾನೇಷುಮಾರಿ ನಂ: 43/30/1, 30/2, ಇದರ ಅಳತೆ 23 x 70 ಅಡಿಗಳು ಇದರಲ್ಲಿ ಮಣ್ಣಿನಿಂದ ಕಟ್ಟಿರುವ ಕರಿ ಹೆಂಚಿನ ವಾಸದ ಮನೆ(15 x 30) | 2,74,000-00 |
| 4 | ಎದುರುದಾರರು ಮತ್ತು ಅವರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಜಂಟಿ ಹೆಸರಿನಲ್ಲಿರುವ ಶಿವನಹಳ್ಳಿ ಗ್ರಾಮದ ಸರ್ವೇ ನಂಬರ್ 116 ಈ ಜಮೀನಿನ ಮೌಲ್ಯ. | 3,50,000-00 |
| 5 | ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮಿನಾಗಮ್ಮ ರವರ ಹೆಸರಿನಲ್ಲಿರುವ ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಜಕ್ಕನಹಳ್ಳಿ ಗ್ರಾಮದ ಸರ್ವೇ ನಂಬರ್ 94 ರಲ್ಲಿ 01 ಎಕರೆ 08 ಗುಂಟೆ ಜಮೀನು ಮೌಲ್ಯ. | ಧಾನ ಪತ್ರ |
| 6 | ಎದುರುದಾರರ ಮತ್ತು ಅವರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಜಂಟಿ ಹೆಸರಿನಲ್ಲಿರುವ ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಜಕ್ಕನಹಳ್ಳಿ ಗ್ರಾಮದ ಸರ್ವೇ ನಂಬರ್ 66/02 ಜಮೀನಿನ ಮೌಲ್ಯ. | 1,30,000-00 |
| 7 | ಎದುರುದಾರರ ಹೆಸರಿನಲ್ಲಿರುವ ರಾಮನಗರ ತಾಲ್ಲೂಕು, ಕಸಬಾ ಹೋಬಳಿ, ಬಿಳಗುಂಬ ಗ್ರಾಮದ ಸರ್ವೇ ನಂಬರ್ 232 ರಲ್ಲಿ 2 ಎಕರೆ 27 ಗುಂಟೆ ಜಮೀನಿನ ಮೌಲ್ಯ. | ವಿಲ್ ಮೂಲಕ |
| 8 | ನಗದು ಹಣ<br>ಎದುರುದಾರರ ವಾಸದ ಮನೆ ಖಾತಾ ಸಂಖ್ಯೆ 231/182, ಬನ್ನಿಕುಪ್ಪೆ ಗ್ರಾಮ, ಕೈಲಂಚ ಹೋಬಳಿ, ರಾಮನಗರ ತಾಲ್ಲೂಕು. ಇಲ್ಲಿ ದಿ: 06/12/2016 ರಂದು ನಡೆಸಿದ ಶೋಧನಾ ಸಮಯದಲ್ಲಿ ದೊರೆತ ನಗದು ಹಣ. | 13,600-00 |
| 9 | ಗೃಹೋಪಯೋಗಿ ವಸ್ತುಗಳ ಮೌಲ್ಯ<br>ಎದುರುದಾರರ ವಾಸದ ಮನೆ ಖಾತಾ ನಂ. ಖಾತಾ ಸಂ: 231/182, ಬನ್ನಿಕುಪ್ಪೆ ಗ್ರಾಮ, ಕೈಲಂಚ ಹೋಬಳಿ, ರಾಮನಗರ ತಾಲ್ಲೂಕು. ಇಲ್ಲಿ ದಿ: 06/12/2016 ರಂದು ನಡೆಸಿದ ಶೋಧನಾ ಕಾಲದಲ್ಲಿ ದೊರೆತ ಗೃಹೋಪಯೋಗಿ ವಸ್ತುಗಳ ಮೌಲ್ಯ. | 2,76,525-00 |

| | | |
|---|---|---|
| 10 | <u>ವಿದ್ಯುತ್ ಶೇವಣಿ</u>- ಇಲ್ಲ | - |
| 11 | <u>ಬ್ಯಾಂಕ್ ಖಾತೆಗಳ ಬಾಕಿ ಮೊತ್ತ:-</u><br>1) ಎದುರುದಾರರ ಹೆಸರಿನಲ್ಲಿರುವ ಕಾರ್ಪೋರೇಷನ್ ಬ್ಯಾಂಕ್, ಬನ್ನಿಕುಪ್ಪೆ ಶಾಖೆ, ರಾಮನಗರ ತಾಲ್ಲೂಕು ಇಲ್ಲಿನ ಎಸ್.ಬಿ. ಖಾತೆ ಸಂ: 149600101110064 ರಲ್ಲಿನ ಬಾಕಿ ಮೊತ್ತ. | 664-00 |
| 12 | 2) ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿರುವ ಕಾರ್ಪೋರೇಷನ್ ಬ್ಯಾಂಕ್, ಬನ್ನಿಕುಪ್ಪೆ ಶಾಖೆಯಲ್ಲಿ ಎಸ್.ಬಿ ಖಾತೆ ಸಂಖ್ಯೆ: 149600101110064 ರಲ್ಲಿನ ಬಾಕಿ ಮೊತ್ತ. | 684-00 |
| 13 | 3) ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿರುವ ಎಸ್.ಬಿ.ಎಂ ಬ್ಯಾಂಕ್, ರಾಮನಗರ ಶಾಖೆಯಲ್ಲಿ ಎಸ್.ಬಿ ಖಾತೆ ಸಂಖ್ಯೆ: 64136173133 ರಲ್ಲಿರುವ ಬಾಕಿ ಮೊತ್ತ. | 307-00 |
| 14 | 4) ಎದುರುದಾರರ ಹೆಸರಿನಲ್ಲಿರುವ ಕೆನರಾ ಬ್ಯಾಂಕ್, ರಾಮನಗರ ಶಾಖೆ, ಇಲ್ಲಿನ ಎಸ್.ಬಿ ಖಾತೆ ಸಂಖ್ಯೆ 028063 ರಲ್ಲಿನ ಬಾಕಿ ಮೊತ್ತ. | 3223-00 |
| 15 | 5) ಎದುರುದಾರರ ಹೆಸರಿನಲ್ಲಿರುವ ಕಾವೇರಿ ಗ್ರಾಮೀಣ ಬ್ಯಾಂಕ್, ಕೈಲಾಂಚ ಶಾಖೆ, ಇಲ್ಲಿನ ಎಸ್.ಬಿ ಖಾತೆ ಸಂಖ್ಯೆ 13185039258 ರಲ್ಲಿನ ಬಾಕಿ ಮೊತ್ತ. | 820-00 |
| 16 | 6) ಎದುರುದಾರರ ಮಗ ಶ್ರೇಯಸ್ ಬಿ.ಜಿ ಇವರ ಹೆಸರಿನಲ್ಲಿರುವ ಕಾರ್ಪೋರೇಷನ್ ಬ್ಯಾಂಕ್, ಬನ್ನಿಕುಪ್ಪೆ ಶಾಖೆಯಲ್ಲಿನ ಎಸ್.ಬಿ ಖಾತೆ ಸಂಖ್ಯೆ 149600101004432 ರಲ್ಲಿರುವ ಬಾಕಿ ಮೊತ್ತ. | 1045-00 |
| 17 | 7) ಎದುರುದಾರರ ಮಗ ತೇಜಸ್ ಬಿ.ಜಿ ಇವರ ಹೆಸರಿನಲ್ಲಿರುವ ಕಾಪೋರೇಷನ್ ಬ್ಯಾಂಕ್, ಬನ್ನಿಕುಪ್ಪೆ ಶಾಖೆಯಲ್ಲಿನ ಎಸ್.ಬಿ. ಖಾತೆ ಸಂ: 149600101004432 ರಲ್ಲಿರುವ ಬಾಕಿ ಮೊತ್ತ. | 1045-00 |
| 18 | <u>ವಾಹನಗಳು</u><br>1. ಎದುರುದಾರರ ಹೆಸರಿನಲ್ಲಿರುವ ಕೆಎ.42.ಡಬ್ಲ್ಯೂ 1449 ಸುಜುಕಿ ಆಕ್ಸಸ್ ಸ್ಕೂಟರ್ ಖರೀದಿ ಮೊತ್ತ | 70,000-00 |
| 19 | <u>ಅಡುಗೆ ಅನಿಲ ಶೇವಣಿ:-</u><br>ಎದುರುದಾರರ ಹೆಸರಿನಲ್ಲಿರುವ ಹೆಚ್.ಪಿ ಕಂಪನಿಗೆ ಸೇರಿದ ಅಡುಗೆ ಅನಿಲ ಸಿಲಿಂಡರ್ ಪಡೆಯಲು ತುಂಬಿದ ಶೇವಣಿ. (ಕನ್ಸೂಮರ್ ನಂ. 623342) | 2200-00 |
| 20 | <u>ಆಭರಣಗಳು</u><br>ಎದುರುದಾರರ ವಾಸದ ಮನೆ ಖಾತಾ ಸಂ: 231/182, ಬನ್ನಿಕುಪ್ಪೆ ಗ್ರಾಮ, ಕೈಲಂಚ ಹೋಬಳಿ, ರಾಮನಗರ ತಾಲ್ಲೂಕು. ಇಲ್ಲಿ ದಿ: 06/12/2016 ರಂದು ನಡೆಸಿದ ಶೋಧನಾ ಕಾಲದಲ್ಲಿ ದೊರೆತ ಚಿನ್ನ ಮತ್ತು ಬೆಳ್ಳಿ ಆಭರಣಗಳ ಮೌಲ್ಯ. | 2,66,600-00 |

| | | |
|---|---|---|
| 21 | ಕಾರ್ಪೋರೇಷನ್ ಬ್ಯಾಂಕ್, ಬನ್ನಿಕುಪ್ಪೆ ಗ್ರಾಮ, ಕೈಲಂಚ ಹೋಬಳಿ, ರಾಮನಗರ ತಾಲ್ಲೂಕು ಇಲ್ಲಿ ಸಾಲದ ಖಾತೆ ಸಂಖ್ಯೆ: 1) ACADL/a/160113 2) ACADL/a/160114 ರಲ್ಲಿ ಎದುರುದಾರರ ಹೆಸರಿನಲ್ಲಿ ಪಡೆದ ಸಾಲ. (177.50 ಗ್ರಾಂ ಚಿನ್ನದ ಒಡವೆಗಳು) | 470375-00 |
| | ಒಟ್ಟು | 51,33,805-00 |

**ಕ್ರಮ ಸಂಖ್ಯೆ:** 1 ರಿಂದ 4 & 6 ರಲ್ಲಿ ನಮೂದಿಸಿದ ಸ್ವತ್ತುಗಳನ್ನು ಎದುರುದಾರರು ನಿಗದಿಪಡಿಸಿದ ಪ್ರಾಧಿಕಾರದ ತಿಳುವಳಿಕೆಗೆ ಇಲ್ಲದಂತೆ ತಮ್ಮ ಪತ್ನಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿ ಅರ್ಜಿಸಿ, ಕೆ.ಸಿ.ಎಸ್.ಆರ್. (ನಡತೆ) ನಿಯಮ 23(2) ಅನ್ನು ಉಲ್ಲಂಘಿಸಿರುತ್ತಾರೆ.

**ಕ್ರಮ ಸಂಖ್ಯೆ:** 5 & 7 ರಲ್ಲಿ ನಮೂದಿಸಿದ ಸ್ಥಿರಾಸ್ತಿಯನ್ನು ದಾನ ಪತ್ರ ಹಾಗೂ ವಿಲ್ ಮೂಲಕ ಎದುರುದಾರರ ಹೆಂಡತಿ ಹಾಗೂ ಎದುರುದಾರರ ಹೆಸರಿನಲ್ಲಿ ಕ್ರಮವಾಗಿ ಪಡೆದುಕೊಂಡು ಕೆ.ಸಿ.ಎಸ್.ಆರ್. (ನಡತೆ) ನಿಯಮ 14 ಅನ್ನು ಉಲ್ಲಂಘಿಸಿರುತ್ತಾರೆ.

**ಕ್ರಮ ಸಂಖ್ಯೆ:** 9, 18, 20 ರಲ್ಲಿ ನಮೂದಿಸಿದ ಚರಾಸ್ತಿಗಳು ಎದುರುದಾರರ ಮನೆ ಶೋಧನಾ ಕಾಲಕ್ಕೆ ದೊರೆತಿದ್ದು, ಸದರಿ ಸ್ವತ್ತುಗಳನ್ನು ಹೊಂದಿದ ಬಗ್ಗೆ ನಿಗದಿತ ಪ್ರಾಧಿಕಾರಕ್ಕೆ ವರದಿಸದೆ ಕೆ.ಸಿ.ಎಸ್.ಆರ್. (ನಡತೆ) ನಿಯಮ 23 (3) ಅನ್ನು ಉಲ್ಲಂಘಿಸಿರುತ್ತಾರೆ.

**ಕ್ರಮ ಸಂಖ್ಯೆ:** 21 ರಲ್ಲಿ ನಮೂದಿಸಿದಂತೆ ಎದುರುದಾರರು, ಬನ್ನಿಕುಪ್ಪೆ ಗ್ರಾಮದ, ಕಾರ್ಪೋರೇಷನ್ ಬ್ಯಾಂಕ್‌ನಲ್ಲಿ ಸರ್ಕಾರದ ಅನುಮತಿ ಪಡೆಯದೇ ಸಾಲವನ್ನು ಪಡೆದುಕೊಂಡು, ಕೆ.ಸಿ.ಎಸ್.ಆರ್. (ನಡತೆ) ನಿಯಮ 21(4) ಅನ್ನು ಉಲ್ಲಂಘಿಸಿರುತ್ತಾರೆ.

**5. <u>ಪರಿಶೀಲನಾ ಅವಧಿಯಲ್ಲಿ ಎದುರುದಾರರು ಮಾಡಿದ ಖರ್ಚಿನ ವಿವರಗಳು:</u>**

| ಕ್ರ.ಸಂ | ಖರ್ಚಿನ ವಿವರಗಳು | ಮೌಲ್ಯ |
|---|---|---|
| 1 | ಆಸ್ತಿ ಖರೀದಿಯ ನೋಂದಣಿ ಮತ್ತು ಮುದ್ರಾಂಕ ಶುಲ್ಕಗಳ ವೆಚ್ಚಗಳು: ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿರುವ ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಬನ್ನಿಕುಪ್ಪೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ನಿವೇಸನ ಇದರ ಖಾನೇಷುಮಾರಿ ಸಂಖ್ಯೆ: 231/182, ಇದರ ಅಳತೆ 50 x 80 ಅಡಿಗಳು. | 6025-00 |
| 2 | ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ರವರ ಹೆಸರಿನಲ್ಲಿರುವ ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಬನ್ನಿಕುಪ್ಪೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಖಾನೇಷುಮಾರಿ ನಂ: 43/30/1, 30/2, ಇದರ ಅಳತೆ 23 x 70 ಅಡಿಗಳು ಇದರಲ್ಲಿ ಮಣ್ಣಿನಿಂದ ಕಟ್ಟಿರುವ ಕರಿ ಹೆಂಚಿನ ವಾಸದ ಮನೆ(15 x 30) | 21320-00 |

| | | |
|---|---|---|
| 3 | ಎದುರುದಾರರು ಮತ್ತು ಅವರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಜಂಟಿ ಹೆಸರಿನಲ್ಲಿರುವ ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಬನ್ನಿಕುಪ್ಪೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಶಿವನಹಳ್ಳಿ ಗ್ರಾಮದ ಸರ್ವೇ ನಂ 116 ರ ಜಮೀನು ಪತ್ರ | 1040-00 |
| 4 | ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿರುವ ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಬನ್ನಿಕುಪ್ಪೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಶಿವನಹಳ್ಳಿ ಗ್ರಾಮದ ಸರ್ವೇ ನಂ 94 ವಿಸ್ತೀರ್ಣ 01 ಎಕರೆ 08 ಗುಂಟೆ ಜಮೀನು | 1630-00 |
| 5 | ಎದುರುದಾರರು ಮತ್ತು ಅವರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಜಂಟಿ ಹೆಸರಿನಲ್ಲಿರುವ ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಬನ್ನಿಕುಪ್ಪೆ ಗ್ರಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಶಿವನಹಳ್ಳಿ ಗ್ರಾಮದ ಸರ್ವೇ ನಂ 62/2 ಇದರ ಜಮೀನು ಪತ್ರ | 10140-00 |
| 6 | **ವಾಹನಗಳ ಇಂಧನ / ದುರಸ್ಥಿ ಮಾಡಿರುವ ವೆಚ್ಚ:**<br>ಎದುರುದಾರರ ಹೆಸರಿನಲ್ಲಿರುವ ಸುಜುಕಿ ಆಕ್ಸೆಸ್ 125 ಸ್ಕೂಟರ್ ಕೆಎ 42 ಡಬ್ಲ್ಯೂ 1449. ವಾಹನದ ಇಂಧನ/ದುರಸ್ಥಿ ಹಾಗೂ ವಿಮಾ ಶುಲ್ಕ, ತೆರಿಗೆ ವೆಚ್ಚಗಳ ಮೌಲ್ಯ. | 3060-00 |
| 7 | ಎದುರುದಾರರ ಹೆಸರಿನಲ್ಲಿ ಚೆಕ್ ಪಿರಿಯಡ್ ಮುಂಚಿತವಾಗಿ 2000 ನೇ ಇಸವಿಯಲ್ಲಿ ಕೆಎ 06 6307 ನಂಬರಿನ ಟಾಟಾ 407 ಲಗೇಜ್ ಟೆಂಪೋವನ್ನು ಹೊಂದಿದ್ದು, ಸದರಿ ವಾಹನದ ವಿಮಾ ಶುಲ್ಕ. | 54,242-00 |
| 8 | **ಸ್ವತ್ತು ಕಂದಾಯ ಪಾವತಿ ವೆಚ್ಚ:**<br>ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿರುವ ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಬನ್ನಿಕುಪ್ಪೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಖಾನೇಷುಮಾರಿ ನಂ: 231/182, ಡೂಪ್ಲೆಕ್ಸ್ ಮನೆಯ ಕಂದಾಯ ಪಾವತಿ | 2646-00 |
| 9 | ಎದುರುದಾರರು ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿರುವ ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಬನ್ನಿಕುಪ್ಪೆ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಖಾನೇಷುಮಾರಿ ನಂ: 43/30/1, 30/2 ಇದರ ಅಳತೆ 23 x 70 ಅಡಿಗಳು, ಈ ನಿವೇಶನದಲ್ಲಿ ಮಣ್ಣಿನಿಂದ ಕಟ್ಟಿದ ಕರಿ ಹೆಂಚಿನ ವಾಸದ ಮನೆಯ ಕಂದಾಯ ಪಾವತಿ (15 x 30) | 488-00 |
| 10 | ಎದುರುದಾರರು ಮತ್ತು ಅವರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿರುವ ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಬನ್ನಿಕುಪ್ಪೆ ಗ್ರಮ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಶಿವನಹಳ್ಳಿ ಗ್ರಾಮದ ಸರ್ವೇ ನಂ 94, ವಿಸ್ತೀರ್ಣ 01 ಎಕರೆ 08 ಗುಂಟೆ ಜಮೀನಿನ ಆಸ್ತಿ ತೆರಿಗೆ | 82-00 |
| 11 | **ನೀರು ಬಳಕೆ ವೆಚ್ಚ:-**<br>ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿರುವ | 480-00 |

| | | |
|---|---|---|
| | ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಬನ್ನಿಕುಪ್ಪೆ ಗ್ರಾಮ ಪಂಚಾಯಿತ್ತಿ ವ್ಯಾಪ್ತಿಗೆ ಸೇರಿದ ಖಾನೇಷುಮಾರಿ ನಂಬರ್: 231/182, ಡೂಪ್ಲೆಕ್ಸ್ ಮನೆಯ ನೀರಿನ ತೆರಿಗೆ ಪಾವತಿಸಿದ ಮೊತ್ತ. | |
| 12 | <u>ವಿದ್ಯುತ್ ಶುಲ್ಕದ ವೆಚ್ಚಗಳು:</u><br>ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿರುವ ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಬನ್ನಿಕುಪ್ಪೆ ಗ್ರಾಮ ಪಂಚಾಯಿತ್ತಿ ವ್ಯಾಪ್ತಿಗೆ ಸೇರಿದ ಖಾನೇಷುಮಾರಿ ನಂಬರ್: 231/182 ಇದರಲ್ಲಿರುವ ಡೂಪ್ಲೆಕ್ಸ್ ಮನೆಯ ವಿದ್ಯುತ್ ಬಳಕೆ ಶುಲ್ಕ. (ಆರ್.ಆರ್.ನಂ. RLEH 95) | 3423-00 |
| 13 | <u>ಬ್ಯಾಂಕ್ ಸಾಲದ ಮರುಪಾವತಿ ವೆಚ್ಚ</u><br>ಎದುರುದಾರರ ಹೆಸರಿನಲ್ಲಿರುವ ಕಾರ್ಪೋರೇಷನ್ ಬ್ಯಾಂಕ್, ಬನ್ನಿಕುಪ್ಪೆ ಶಾಖೆಯಲ್ಲಿ, ಜಕ್ಕನಹಳ್ಳಿ ಸರ್ವೇ ನಂ 66/2, ವಿಸ್ತೀರ್ಣ 0-26 ಗುಂಟೆ ಜಮೀನನ್ನು ಅಡಮಾನವಿಟ್ಟು ಪಡೆದಿರುವ ಸಾಲದ ಖಾತೆಗೆ ಜಮಾ ಮಾಡಿದ ಮೊತ್ತ. (ಖಾತೆ ಸಂ: CCCK/1/150015) | 7891-00 |
| 14 | <u>ಕೃಷಿ ಖರ್ಚು:-</u><br>1. ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿರುವ ಜಕ್ಕನಹಳ್ಳಿ ಗ್ರಾಮದ ಸರ್ವೇ ನಂ 94 ರಲ್ಲಿ 01 ಎಕರೆ 08 ಗುಂಟೆ ಜಮೀನಿನಲ್ಲಿ ಬೆಳೆದ ರೇಷ್ಮೆ ಬೆಳೆಯ ಖರ್ಚು | 2,51,250-00 |
| 15 | 2. ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿರುವ ಜಕ್ಕನಹಳ್ಳಿ ಗ್ರಾಮದ ಸರ್ವೇ ನಂ 94, ವಿಸ್ತೀರ್ಣ 01 ಎಕರೆ 08 ಗುಂಟೆ ಜಮೀನಿನಲ್ಲಿ ಬೆಳೆದ ತೆಂಗು ಬೆಳೆಯ ಖರ್ಚು | 23,241-00 |
| 16 | 3. ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿರುವ ಜಕ್ಕನಹಳ್ಳಿ ಗ್ರಾಮದ ಸರ್ವೇ ನಂ 94 ರಲ್ಲಿ 01 ಎಕರೆ 08 ಗುಂಟೆ ಜಮೀನಿನಲ್ಲಿ ಬೆಳೆದ ರಾಗಿ ಬೆಳೆಯ ಖರ್ಚು | 35921-00 |
| 17 | 4. ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಜಂಟಿ ಹೆಸರಿನಲ್ಲಿರುವ ಜಕ್ಕನಹಳ್ಳಿ ಗ್ರಾಮದ ಸರ್ವೇ ನಂ 66/2 ರ ಜಮೀನಿನಲ್ಲಿ ಬೆಳೆದ ರೇಷ್ಮೆ ಬೆಳೆಯ ಖರ್ಚು | 1,04,640-00 |
| 18 | 5. ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿರುವ ಜಕ್ಕನಹಳ್ಳಿ ಗ್ರಾಮದ ಸರ್ವೇ ನಂ 66/2 ರ ಜಮೀನಿನಲ್ಲಿ ಬೆಳೆದ ತೆಂಗು ಬೆಳೆಯ ಖರ್ಚು | 18,039-00 |
| 19 | <u>ಮೀನು ಸಾಕಾಣಿಕೆ ವೆಚ್ಚ:-</u><br>ರಾಮನಗರ ತಾಲ್ಲೂಕು ಜಕ್ಕನಹಳ್ಳಿಯ ಗ್ರಾಮದ ಕೆರೆಯ ಮೀನು ಸಾಕಾಣಿಕೆ ಟೆಂಡರ್ ಅನ್ನು ದಿ: 18-08-2011 ರಂದು 05 ವರ್ಷಗಳ ಅವಧಿಗೆ ಎದುರುದಾರರು ಪಡೆದುಕೊಂಡು ಮೀನು ಸಾಕಾಣಿಕೆ ಮಾಡಿದ್ದು, | 1,03,655-00 |

| | | |
|---|---|---|
| | ಮೀನುಸಾಕಾಣಿಕೆ ವೆಚ್ಚ | |
| 20 | ಎಲ್.ಐ.ಸಿ. ವಂತಿಗೆ ಪಾವತಿ ವೆಚ್ಚ:<br>ಎದುರುದಾರರ ಹೆಸರಿನಲ್ಲಿರುವ ಎಲ್.ಐ.ಸಿ ಪಾಲಿಸಿ ನಂ. 364408026 ಕ್ಕೆ ಪಾವತಿಸಿರುವ ಪ್ರಿಮೀಯರ್ ಮೊತ್ತ. | 27,136-00 |
| 21 | ಎದುರುದಾರರ ಹೆಸರಿನಲ್ಲಿರುವ ಎಲ್.ಐ.ಸಿ ಪಾಲಿಸಿ ನಂ. 698746282 ಕ್ಕೆ ಪಾವತಿಸಿರುವ ಪ್ರಿಮೀಯರ್ ಮೊತ್ತ. | 23,833-00 |
| 22 | ಎದುರುದಾರರ ಹೆಸರಿನಲ್ಲಿರುವ ಎಲ್.ಐ.ಸಿ ಪಾಲಿಸಿ ನಂ. 360327010 ಕ್ಕೆ ಪಾವತಿಸಿರುವ ಪ್ರಿಮೀಯರ್ ಮೊತ್ತ. | 12,570-00 |
| 23 | ಎದುರುದಾರರ ಹೆಸರಿನಲ್ಲಿರುವ ಎಲ್.ಐ.ಸಿ ಪಾಲಿಸಿ ನಂ. 364408250 ಕ್ಕೆ ಪಾವತಿಸಿರುವ ಪ್ರಿಮೀಯರ್ ಮೊತ್ತ. | 26432-00 |
| 24 | ಎದುರುದಾರರ ಪತ್ನಿ ಲಕ್ಷ್ಮೀನಾಗಮ್ಮರವರ ಹೆಸರಿನಲ್ಲಿರುವ ಎಲ್.ಐ.ಸಿ ಪಾಲಿಸಿ ನಂ. 638746281 ಕ್ಕೆ ಪಾವತಿಸಿರುವ ಪ್ರಿಮೀಯರ್ ಮೊತ್ತ. | 10,578-00 |
| 25 | ಎದುರುದಾರರ ಪತ್ನಿ ಲಕ್ಷ್ಮೀನಾಗಮ್ಮರವರ ಹೆಸರಿನಲ್ಲಿರುವ ಎಲ್.ಐ.ಸಿ ಪಾಲಿಸಿ ನಂ. 698485355 ಕ್ಕೆ ಪಾವತಿಸಿರುವ ಪ್ರಿಮೀಯರ್ ಮೊತ್ತ. | 9828-00 |
| 26 | ಎದುರುದಾರರ ಪತ್ನಿ ಲಕ್ಷ್ಮೀನಾಗಮ್ಮರವರ ಹೆಸರಿನಲ್ಲಿರುವ ಎಲ್.ಐ.ಸಿ ಪಾಲಿಸಿ ನಂ. 698485356 ಕ್ಕೆ ಪಾವತಿಸಿರುವ ಪ್ರಿಮೀಯರ್ ಮೊತ್ತ. | 15,548-00 |
| 27 | ಎದುರುದಾರರ ಪತ್ನಿ ಲಕ್ಷ್ಮೀನಾಗಮ್ಮರವರ ಹೆಸರಿನಲ್ಲಿರುವ ಎಲ್.ಐ.ಸಿ ಪಾಲಿಸಿ ನಂ. 698485357 ಕ್ಕೆ ಪಾವತಿಸಿರುವ ಪ್ರಿಮೀಯರ್ ಮೊತ್ತ. | 13,100-00 |
| 28 | ಎದುರುದಾರರ ಪತ್ನಿ ಲಕ್ಷ್ಮೀನಾಗಮ್ಮರವರ ಹೆಸರಿನಲ್ಲಿರುವ ಎಲ್.ಐ.ಸಿ ಪಾಲಿಸಿ ನಂ. 698485358 ಕ್ಕೆ ಪಾವತಿಸಿರುವ ಪ್ರಿಮೀಯರ್ ಮೊತ್ತ. | 10,600-00 |
| 29 | ಮಕ್ಕಳ ವಿದ್ಯಾಭ್ಯಾಸದ ವೆಚ್ಚಗಳು:<br>ಎದುರುದಾರರ ಮಗ ಶ್ರೀ ತೇಜಸ್ ಬಿ.ಜಿ ರವರ ವಿದ್ಯಾಭ್ಯಾಸಕ್ಕಾಗಿ ಮಾಡಲಾಗಿರುವ ವೆಚ್ಚದ ಮೊತ್ತ | 1,32,566-00 |
| 30 | ಎದುರುದಾರರ ಮಗ ಶ್ರೀ ಶ್ರೇಯಸ್ ಬಿ.ಜಿ ರವರ ವಿದ್ಯಾಭ್ಯಾಸಕ್ಕಾಗಿ ಮಾಡಲಾಗಿರುವ ವೆಚ್ಚದ ಮೊತ್ತ | 78,246-00 |
| 31 | ಕೌಟುಂಬಿಕ ವೆಚ್ಚಗಳು:<br>ಎದುರುದಾರರ ಕುಟುಂಬದ ಕೌಟುಂಬಿಕ ಖರ್ಚು-ವೆಚ್ಚದ ಮೊತ್ತ | 6,86,279-00 |
| 32 | ಗೃಹ ಬಳಕೆಯ ಅನಿಲ ಸಿಲಿಂಡರ್‌ಗಳ ವೆಚ್ಚ:<br>ಎದುರುದಾರರ ಹೆಸರಿನಲ್ಲಿರುವ ಭಾರತ್ ಗ್ಯಾಸ್ ಕಂಪನಿಯ ಗೃಹ ಬಳಕೆಯ ಅನಿಲ ಸಿಲಿಂಡರ್ ಬಳಕೆಯ ವೆಚ್ಚ. (ಗ್ರಾಹಕ ಸಂಖ್ಯೆ: 623342) | 12,500-00 |
| 33 | ಬ್ಯಾಂಕ್ ಚಾರ್ಜಸ್ ವಿವರ:-<br>1. ಎದುರುದಾರರ ಹೆಸರಿನಲ್ಲಿ ಕಾರ್ಪೋರೇಷನ್ ಬ್ಯಾಂಕ್, ಬನ್ನಿಕುಪ್ಪೆ ಶಾಖೆಯಲ್ಲಿರುವ ಎಸ್.ಬಿ. ಅಕೌಂಟ್ ನಂಬರ್: 149600101110064 | 3366-00 |
| 34 | 2. ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಹೆಸರಿನಲ್ಲಿ | 1337-00 |

| | | |
|---|---|---|
| | ಕಾರ್ಪೋರೇಷನ್ ಬ್ಯಾಂಕ್, ಬನ್ನಿಕುಪ್ಪೆ ಶಾಖೆಯಲ್ಲಿರುವ ಎಸ್.ಬಿ. ಅಕೌಂಟ್ ನಂಬರ್: 149600101110260 | |
| 35 | 3. ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಹೆಸರಿನಲ್ಲಿ ಎಸ್.ಬಿ.ಎಂ, ರಾಮನಗರದ ವಿದ್ಯಾನಗರ ಶಾಖೆಯಲ್ಲಿರುವ ಎಸ್.ಬಿ. ಅಕೌಂಟ್ ನಂಬರ್: 64136173133 | 311-00 |
| 36 | 4. ಎದುರುದಾರರ ಹೆಸರಿನಲ್ಲಿ ಕೆನರಾ ಬ್ಯಾಂಕ್, ರಾಮನಗರದಲ್ಲಿರುವ ಎಸ್.ಬಿ. ಅಕೌಂಟ್ ನಂಬರ್: 028063 | 2722-00 |
| 37 | 5. ಎದುರುದಾರರ ಹೆಸರಿನಲ್ಲಿ ಕಾವೇರಿ ಗ್ರಾಮೀಣ ಬ್ಯಾಂಕ್, ಕೈಲಂಚ ಶಾಖೆಯಲ್ಲಿ ಎಸ್.ಬಿ ಅಕೌಂಟ್ ನಂಬರ್: 13185039258 | 22-00 |
| | **ಒಟ್ಟು** | **17,15,707-00** |

**ಕ್ರಮ ಸಂ:** 14 ರಿಂದ 19 ರಲ್ಲಿ ನಮೂದಿಸಿದ ಮೊತ್ತವನ್ನು ಎದುರುದಾರರು ತಮ್ಮ ಪತ್ನಿ ಹೆಸರಿನಲ್ಲಿರುವ ಜಮೀನಿನಲ್ಲಿ ರೇಷ್ಮೆ, ತೆಂಗು, ರಾಗಿ ಬೆಳೆಯಲು ಹಾಗೂ ಮೀನು ಸಾಕಣಿಕೆಗೆ ಖರ್ಚು ಮಾಡಿ, ಕೆ.ಸಿ.ಎಸ್.ಆರ್. (ನಡತೆ) ನಿಯಮ 21(1) ಅನ್ನು ಉಲ್ಲಂಘಿಸಿರುತ್ತಾರೆ.

**ಕ್ರಮ ಸಂ:** 20, 21, 22, 23 ರಲ್ಲಿ ನಮೂದಿಸಿದ ಮೊತ್ತವನ್ನು ಎದುರುದಾರರು ತಮ್ಮ ಹೆಸರಿನಲ್ಲಿರುವ ಎಲ್.ಐ.ಸಿ ಪಾಲಿಸಿಗಳ ವಿಮಾ ಕಂತನ್ನು ತುಂಬಿದ್ದು, ಕ್ರಮ ಸಂ: 24 ರಿಂ 28 ರಲ್ಲಿ ತೋರಿಸಿದ ಮೊತ್ತವನ್ನು ಎದುರುದಾರರು ತಮ್ಮ ಹೆಂಡತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿ ಮಾಡಿಸಿದ ಇನ್ಸೂರೆನ್ಸ್ ಪಾಲಿಸಿಗಳ ವಿಮಾ ಕಂತನ್ನು ತುಂಬಿ, ಕೆ.ಸಿ.ಎಸ್.ಆರ್. (ನಡತೆ) ನಿಯಮ 21(1) ಅನ್ನು ಉಲ್ಲಂಘಿಸಿರುತ್ತಾರೆ.

**ಕ್ರಮ ಸಂ:** 29 & 30 ರಲ್ಲಿ ನಮೂದಿಸಿದ ಮೊತ್ತವನ್ನು ಎದುರುದಾರರು ತಮ್ಮ ಮಕ್ಕಳಾದ ತೇಜಸ್ ಹಾಗೂ ಶ್ರೇಯಸ್ ಇವರ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸಿ ಕೆ.ಸಿ.ಎಸ್.ಆರ್. (ನಡತೆ) ನಿಯಮ 21(1) ಅನ್ನು ಉಲ್ಲಂಘಿಸಿರುತ್ತಾರೆ.

## 6. ಪರಿಶೀಲನಾ ಅವಧಿಯಲ್ಲಿ ಎದುರುದಾರರು ಬಲ್ಲ ಮೂಲಗಳಿಂದ ಗಳಿಸಿದ ಆದಾಯದ ವಿವರಗಳು :

| ಕ್ರಸಂ | ಆದಾಯದ ವಿವರಗಳು | ಮೌಲ್ಯ |
|---|---|---|
| 1 | ಎದುರುದಾರರು ಪರಿಶೀಲನಾ ಅವದಿಯಲ್ಲಿ ಅಂದರೆ ದಿನಾಂಕ: 15-01-2005 ರಿಂದ 31/10/2016 ರವರೆಗೆ ಪಡೆದಿರುವ ವೇತನ. | 4,45,000-00 |
| 2 | ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರು ಬನ್ನಿಕುಪ್ಪೆ ಗ್ರಾಮ ಪಂಚಾಯ್ತಿ ಗ್ರಂಥಾಲಯದಲ್ಲಿ ಮೇಲ್ವಿಚಾರಕರಾಗಿ ಕೆಲಸ ಮಾಡುತ್ತಿದ್ದು, ದಿ: 04-12-2013 ರಿಂದ 31-10-2016 ರವರೆಗೆ ಪಡೆದಿರುವ ನಿವ್ವಳ ವೇತನ. | 1,69,951-00 |

| | | |
|---|---|---|
| 3 | **ಕೃಷಿ ಆದಾಯ:-**<br>1) ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿರುವ ಜಕ್ಕನಹಳ್ಳಿ ಗ್ರಾಮದ ಸರ್ವೇ ನಂ: 94 ರಲ್ಲಿ 01 ಎಕರೆ 08 ಗುಂಟೆ ಜಮೀನಿನಲ್ಲಿ ಬೆಳೆದ ರೇಷ್ಮೆ ಬೆಳೆಯ ಆದಾಯ | 8,37,500-00 |
| 4 | 2) ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿರುವ ಜಕ್ಕನಹಳ್ಳಿ ಗ್ರಾಮದ ಸರ್ವೇ ನಂ 94 ರಲ್ಲಿ 01 ಎಕರೆ 08 ಗುಂಟೆ ಜಮೀನಿನಲ್ಲಿ ಬೆಳೆದ ತಂಗು ಬೆಳೆಯಿಂದ ಬಂದ ಆದಾಯ | 68,468-00 |
| 5 | 3) ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿರುವ ಜಕ್ಕನಹಳ್ಳಿ ಗ್ರಾಮದ ಸರ್ವೇ ನಂ 94 ರಲ್ಲಿ 01 ಎಕರೆ 08 ಗಂಟೆ ಜಮೀನಿನಲ್ಲಿ ಬೆಳೆದ ರಾಗಿ ಬೆಳೆಯ ಆದಾಯ | 40,000-00 |
| 6 | 4) ಎದುರುದಾರರು ಮತ್ತು ಅವರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ರವರ ಜಂಟಿ ಹೆಸರಿನಲ್ಲಿರುವ ಜಕ್ಕನಹಳ್ಳಿ ಗ್ರಾಮದ ಸರ್ವೇ ನಂ 66/2 ರ ಜಮೀನಿನಲ್ಲಿ ಬೆಳೆದ ರೇಷ್ಮೆ ಬೆಳೆಯ ಆದಾಯ | 3,48,800-00 |
| 7 | 5) ಎದುರುದಾರರು ಮತ್ತು ಅವರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ರವರ ಹೆಸರಿನಲ್ಲಿರುವ ಜಕ್ಕನಹಳ್ಳಿ ಗ್ರಾಮದ ಸರ್ವೇ ನಂ 66/2 ರ ಜಮೀನಿನಲ್ಲಿ ಬೆಳೆದ ತೆಂಗು ಬೆಳೆಯ ಆದಾಯ | 65,448-00 |
| 8 | 6) ಎದುರುದಾರರ ಹೆಸರಿನಲ್ಲಿರುವ ಬಿಳುಗುಂಬ ಗ್ರಾಮದ ಸರ್ವೇ ನಂ 232 ರಲ್ಲಿ 2 ಎಕರೆ 27 ಗುಂಟೆ ಜಮೀನಿನಲ್ಲಿ ಬೆಳೆದ ಮಾವಿನ ಬೆಳೆಯ ಆದಾಯ | 1,50,000-00 |
| 9 | ಎದುರುದಾರರ ಹೆಸರಿನಲ್ಲಿರುವ ಎಲ್.ಐ.ಸಿ ಪಾಲಿಸಿ ನಂ 360327010 ರ ಮೇಲೆ ಪಡೆದಿರುವ ಸಾಲದ ಮೊತ್ತ. | 5,250-00 |
| 10 | ಎದುರುದಾರರ ಹೆಸರಿನಲ್ಲಿ ಕಾರ್ಪೋರೇಷನ್ ಬ್ಯಾಂಕ್, ಬನ್ನಿಕುಪ್ಪೆ ಶಾಖೆಯಲ್ಲಿರುವ ಎಸ್.ಬಿ. ಅಕೌಂಟ್ ನಂಬರ್: 149600101110064 ಇದಕ್ಕೆ ಬಂದ ಬಡ್ಡಿ. | 8,576-00 |
| 11 | ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿ ಕಾರ್ಪೋರೇಷನ್ ಬ್ಯಾಂಕ್, ಬನ್ನಿಕುಪ್ಪೆ ಶಾಖೆಯಲ್ಲಿ ಎಸ್.ಬಿ. ಅಕೌಂಟ್ ನಂಬರ್: 149600101110260 ರಲ್ಲಿ ಬಂದ ಬಡ್ಡಿ . | 443-00 |
| 12 | ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿ ಎಸ್.ಬಿ.ಎಂ, ವಿದ್ಯಾನಗರ ಶಾಖೆ, ರಾಮನಗರದಲ್ಲಿರುವ ಎಸ್.ಬಿ. ಅಕೌಂಟ್ ನಂಬರ್: 64136173133 ಇದಕ್ಕೆ ಬಂದ ಬಡ್ಡಿ. | 331-00 |
| 13 | ಎದುರುದಾರರ ಹೆಸರಿನಲ್ಲಿ ಕೆನರಾ ಬ್ಯಾಂಕ್, ರಾಮನಗರ ಶಾಖೆ ಯಲ್ಲಿ ಎಸ್.ಬಿ ಅಕೌಂಟ್ ನಂಬರ್: 028063 ಇದಕ್ಕೆ ಬಂದ ಬಡ್ಡಿ. | 5391-00 |
| 14 | ಎದುರುದಾರರ ಹೆಸರಿನಲ್ಲಿ ಕಾವೇರಿ ಗ್ರಾಮೀಣ ಬ್ಯಾಂಕ್, ಕೈಲಂಚ ಶಾಖೆಯಲ್ಲಿರುವ ಎಸ್.ಬಿ. ಅಕೌಂಟ್ ನಂಬರ್: 13185039258 ಇದಕ್ಕೆ ಬಂದ ಬಡ್ಡಿ. | 736-00 |

| | | |
|---|---|---|
| 15 | ಎದರುದಾರರ ಮಗ ಶ್ರೇಯಸ್ ಬಿ.ಜಿ ಹೆಸರಿನಲ್ಲಿ ಕಾರ್ಪೋರೇಷನ್ ಬ್ಯಾಂಕ್, ಬನ್ನಿಕುಪ್ಪೆ ಶಾಖೆಯಲ್ಲಿರುವ ಎಸ್.ಬಿ. ಅಕೌಂಟ್ ನಂಬರ್:149600101004432 ಇದಕ್ಕೆ ಬಂದ ಬಡ್ಡಿ. | 45-00 |
| 16 | ಆರೋಪಿತ ಮಗ ತೇಜಸ್ ಬಿ.ಜಿ ಹೆಸರಿನಲ್ಲಿ ಕಾರ್ಪೋರೇಷನ್ ಬ್ಯಾಂಕ್, ಬನ್ನಿಕುಪ್ಪೆ ಶಾಖೆಯಲ್ಲಿರುವ ಎಸ್.ಬಿ. ಅಕೌಂಟ್ ನಂಬರ್: 149600101004431 ಇದಕ್ಕೆ ಬಂದ ಬಡ್ಡಿ.. | 45-00 |
| 17 | ಕಾರ್ಪೋರೇಷನ್ ಬ್ಯಾಂಕ್, ರಾಮನಗರ ಶಾಖೆಯಲ್ಲಿ ಎದುರುದಾರರು ತಮ್ಮ ಹೆಸರಿನಲ್ಲಿರುವ ಜಕ್ಕನಹಳ್ಳಿ ಗ್ರಾಮದ ಸರ್ವೇ ನಂ: 66/2 ಇದರ ವಿಸ್ತೀರ್ಣ 26 ಗುಂಟೆ ಜಮೀನನ್ನು ಅಡಮಾನ ಇಟ್ಟು ಪಡೆದಿರುವ ಸಾಲದ ಮೊತ್ತ. (ಸಾಲದ ಖಾತೆ ಸಂಖ್ಯೆ CCCK/1/150015) | 1,00,000-00 |
| 18 | ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿರುವ ಜಕ್ಕನಹಳ್ಳಿ ಗ್ರಾಮದ ಸರ್ವೇ ನಂಬರ್ 94 ಇದರ ವಿಸ್ತೀರ್ಣ 01 ಎಕರೆ 08 ಗುಂಟೆ ಜಮೀನನ್ನು ಕಾವೇರಿ ಗ್ರಾಮೀಣ ಬ್ಯಾಂಕ್, ಕೈಲಂಚ ಶಾಖೆಯಲ್ಲಿ ಅಡಮಾನ ಇಟ್ಟು ಪಡೆದಿರುವ ಸಾಲದ ಮೊತ್ತ. (ಸಾಲದ ಖಾತೆ ಸಂಖ್ಯೆ: 13185025188) | 30,000-00 |
| 19 | ಕಾರ್ಪೋರೇಷನ್ ಬ್ಯಾಂಕ್, ರಾಮನಗರ ಶಾಖೆಯಲ್ಲಿ ಎದುರುದಾರರು ಚಿನ್ನದ ಒಡವೆಗಳನ್ನು ಅಡಮಾನ ಇಟ್ಟು ಪಡೆದಿರುವ ಸಾಲದ ಮೊತ್ತ. (ಸಾಲದ ಖಾತೆ ಸಂ: ACADL/a/160114) | 2,28,000-00 |
| 20 | ಎದುರುದಾರರ ಪತ್ನಿ ಶ್ರೀಮತಿ ಲಕ್ಷ್ಮೀನಾಗಮ್ಮ ಹೆಸರಿನಲ್ಲಿ ವ್ಯವಸಾಯ ಸೇವಾ ಸಹಕಾರ ಬ್ಯಾಂಕ್ ನಿಯಮಿತ, ಬನ್ನಿಕುಪ್ಪೆ ಶಾಖೆಯಲ್ಲಿ ಜಕ್ಕನಹಳ್ಳಿ ಗ್ರಾಮದ ಸರ್ವೇ 94 ಇದರ ವಿಸ್ತೀರ್ಣ 01ಎ 08 ಗುಂಟೆ ಜಮೀನನ್ನು ಅಡಮಾನ ಇಟ್ಟು ಪಡೆದಿರುವ ಸಾಲ | 60,000-00 |
| 21 | ಎದರುದುದಾರರು ದಿ: 18-08-2011 ರಂದು 05 ವರ್ಷಗಳ ಅವಧಿಗೆ ರಾಮನಗರ ತಾಲ್ಲೂಕು ಜಕ್ಕನಹಳ್ಳಿಯ ಕೆರೆಯ ಮೀನು ಸಾಕಾಣಿಕೆ ಟೆಂಡರ್ ಪಡೆದು ಮೀನು ಸಾಕಾಣಿಕೆಯಿಂದ ಪಡೆದ ಆದಾಯ | 1,57,500-00 |
| | **ಒಟ್ಟು** | **27,21,484-00** |

**ಕ್ರಮ ಸಂ:** 3 ರಿಂದ 5 ರಲ್ಲಿ ನಮೂದಿಸಿದ ಮೊತ್ತವು ಎದುರುದಾರರ ಪತ್ನಿ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿರುವ ಜಮೀನಿನಲ್ಲಿ ಬೆಳೆದ ರೇಷ್ಮೆ, ತೆಂಗು, ರಾಗಿ ಬೆಳೆಯಿಂದ ಆದಾಯ ಬಂದಿದ್ದು, ಸದರಿ ಮೊತ್ತವನ್ನು ನಿಗದಿತ ಪ್ರಾಧಿಕಾರಕ್ಕೆ ವರದಿಸದೇ ಕೆ.ಸಿ.ಎಸ್.ಆರ್. (ನಡತೆ) ನಿಯಮ 23(3-ಎ) ಅನ್ನು ಉಲ್ಲಂಘಿಸಿರುತ್ತಾರೆ.

**ಕ್ರಮ ಸಂ:** 6 & 7 ರಲ್ಲಿ ನಮೂದಿಸಿರುವ ಮೊತ್ತವು ಎದುರುದಾರರು ಹಾಗೂ ಅವರ ಪತ್ನಿ ಹೆಸರಿನಲ್ಲಿರುವ ಜಮೀನಿನಲ್ಲಿ ಬೆಳೆದ ರೇಷ್ಮೆ ಹಾಗೂ ತೆಂಗು ಬೆಳೆಯಿಂದ ಬಂದಿದ್ದು, ಸದರಿ ಮೊತ್ತವನ್ನು ನಿಗದಿತ ಪ್ರಾಧಿಕಾರಕ್ಕೆ ವರದಿಸದೇ ಕೆ.ಸಿ.ಎಸ್.ಆರ್. (ನಡತೆ) ನಿಯಮ 23(3-ಎ) ಅನ್ನು ಉಲ್ಲಂಘಿಸಿರುತ್ತಾರೆ.

**ಕ್ರಮ ಸಂ:** 17 ರಲ್ಲಿ ನಮೂದಿಸಿದ ಮೊತ್ತವನ್ನು ಎದುರುದಾರರು ತಮ್ಮ ಹೆಸರಿನಲ್ಲಿರುವ ಜಕ್ಕನಹಳ್ಳಿ ಗ್ರಾಮದ ಸರ್ವೆ ನಂ: 66/2 ಇದನ್ನು ಅಡವಿಟ್ಟು ಕಾರ್ಪೋರೇಷನ್ ಬ್ಯಾಂಕ್, ರಾಮನಗರ ಶಾಖೆಯಲ್ಲಿ ಸಾಲ ಪಡೆದುಕೊಂಡಿರುತ್ತಾರೆ. ಅದೇ ಪ್ರಕಾರ ಕ್ರಮ ಸಂ: 19 ರಲ್ಲಿ ಹೇಳಿದ ಮೊತ್ತವನ್ನು ಅದೇ ಬ್ಯಾಂಕಿನಲ್ಲಿ ಚಿನ್ನದ ಒಡವೆಗಳನ್ನು ಅಡವಿಟ್ಟು, ಸಾಲ ಪಡೆದುಕೊಂಡಿದ್ದು, ಹಾಗೇ ಸಾಲ ಪಡೆದುಕೊಳ್ಳಲು ಸರ್ಕಾರದ ಪೂರ್ವ ಪರವಾನಗಿ ತೆಗೆದುಕೊಳ್ಳದೆ, ಕೆ.ಸಿ.ಎಸ್.ಆರ್. (ನಡತೆ) ನಿಯಮ 21(4) ಅನ್ನು ಉಲ್ಲಂಘಿಸಿರುತ್ತಾರೆ.

**ಕ್ರಮ ಸಂ:** 18 ರಲ್ಲಿ ನಮೂದಿಸಿದ ಮೊತ್ತವನ್ನು ಎದುರುದಾರರು ತಮ್ಮ ಹೆಂಡತಿ ಶ್ರೀ ಲಕ್ಷ್ಮೀನಾಗಮ್ಮ ಇವರ ಹೆಸರಿನಲ್ಲಿ ಕಾವೇರಿ ಗ್ರಾಮೀಣ ಬ್ಯಾಂಕ್, ಕೈಲಾಂಚ ಶಾಖೆ ಹಾಗೂ ಕ್ರ.ಸಂ: 20 ರಲ್ಲಿ ಹೇಳಿದ ಮೊತ್ತವನ್ನು ವ್ಯವಸಾಯ ಸೇವಾ ಸಹಕಾರಿ ಸಂಘ ನಿಯಮಿತ, ಬನ್ನಿಕುಪ್ಪೆಯಲ್ಲಿ ಜಕ್ಕನಹಳ್ಳಿ ಗ್ರಾಮ ಸರ್ವೆ ನಂ: 94 ರಲ್ಲಿ 1 ಎಕರೆ 8 ಗುಂಟೆ ಜಮೀನನ್ನು ಅಡವಿಟ್ಟು, ಸಾಲ ಪಡೆದುಕೊಂಡಿದ್ದು, ಹಾಗೇ ಸಾಲ ಪಡೆದುಕೊಳ್ಳಲು ಸರ್ಕಾರದ ಪೂರ್ವಾನುಮತಿ ಪಡೆದುಕೊಳ್ಳದೇ ಕೆ.ಸಿ.ಎಸ್.ಆರ್. (ನಡತೆ) ನಿಯಮ 21(4) ಅನ್ನು ಉಲ್ಲಂಘಿಸಿರುತ್ತಾರೆ.

**ಕ್ರಮ ಸಂ:** 8 & 21 ರಲ್ಲಿ ನಮೂದಿಸಿದ ಆದಾಯವು ಎದುರುದಾರರಿಗೆ ಮಾವಿನ ಬೆಳೆಯಿಂದ ಹಾಗೂ ಮೀನು ಸಾಕಾಣಿಕೆಯಿಂದ ಬಂದಿದ್ದು, ಸದರಿ ಮೊತ್ತವನ್ನು ನಿಗದಿತ ಪ್ರಾಧಿಕಾರಕ್ಕೆ ವರದಿಸದೇ ಕೆ.ಸಿ.ಎಸ್.ಆರ್. (ನಡತೆ) ನಿಯಮ 23(3-ಎ) ಅನ್ನು ಉಲ್ಲಂಘಿಸಿರುತ್ತಾರೆ.

7. ಎದುರುದಾರರು ಪರಿಶೀಲನಾ ಅವಧಿಯಲ್ಲಿ ಅರ್ಜಿಸಿದ ಸ್ಥಿರ ಹಾಗೂ ಚರ ಆಸ್ತಿಗಳ ಒಟ್ಟು ಮೌಲ್ಯವು ರೂ. 51,33,805/- ಆಗುತ್ತಿದ್ದು, ಸದರಿ ಚೆಕ್ ಅವಧಿಯಲ್ಲಿ ಎದುರುದಾರರು ಮಾಡಿದ ಖರ್ಚುಗಳ ಮೊತ್ತವು ರೂ. 17,15,707/- ಆಗುತ್ತಿದ್ದು, ಇವರೆಡನ್ನು ಸಂಕಲನ ಮಾಡಿದಲ್ಲಿ ಎದುರುದಾರರು ಹೊಂದಿದ ಆಸ್ತಿಯ ಒಟ್ಟು ಮೌಲ್ಯ ರೂ. 68,49,512/- ಆಗುತ್ತಿದ್ದು, ಸದರಿ ಮೊತ್ತದಲ್ಲಿ ಎದುರುದಾರರ ಬಲ್ಲ ಮೂಲಗಳ ಆದಾಯ ರೂ. 27,21,484/- ಗಳನ್ನು ವ್ಯವಕಲನ ಮಾಡಿದಲ್ಲಿ, ಎದುರುದಾರರು ಒಟ್ಟು ರೂ. 41,28,028/- ಗಳಷ್ಟು ಅಂದರೆ 151.68% ರಷ್ಟು ಅಸಮತೋಲನ ಆಸ್ತಿಯನ್ನು ಹೊಂದಿರುವುದು ಮೇಲ್ನೋಟದಲ್ಲಿ ಕಂಡುಬಂದಿರುತ್ತದೆ.

8. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಭಿಯೋಜನೆಗೊಳಿಸಲು ಅಭಿಯೋಜನಾ ಮಂಜೂರಾತಿ ಆದೇಶವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದುಕೊಂಡಿರುತ್ತಾರೆ.

9. ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಯನ್ನು ಸಲ್ಲಿಸಿದ್ದು ಅದರಲ್ಲಿ ಬರೆದುಕೊಂಡ ಅಂಶವೇನೆಂದರೆ ಮುಖ್ಯ ಪ್ಯಾರಾ ಸಂಖ್ಯೆ 22 ರ ಕ್ರಮ ಸಂಖ್ಯೆ 1 ರಿಂದ 4 ಮತ್ತು 6 ರಲ್ಲಿ ಹೇಳಿದ ಸ್ವತ್ತುಗಳನ್ನು 5 ವರ್ಷಗಳ ಹಿಂದೆ ಅರ್ಜಿಸಿರುವುದರಿಂದ ಲೋಕಾಯುಕ್ತ ಕಾಯ್ದೆ ಕಲಂ 8(2) (ಡಿ) ಪ್ರಕಾರ ಈ ಪ್ರಾಧಿಕಾರಕ್ಕೆ ತನಿಖೆ ನಡೆಸಲು ಕಾಲಮಿತಿ ಬಾದಾ ಇರುತ್ತದೆ. ಅದೇ ಮುಖ್ಯ ಪ್ಯಾರಾದ ಕ್ರಮ ಸಂಖ್ಯೆ 5 ಮತ್ತು 7 ರಲ್ಲಿ ನಮೂದಿಸಿದ ಸ್ವತ್ತುಗಳನ್ನು ಕ್ರಮವಾಗಿ ತನ್ನ ಪತ್ನಿ ಹೆಸರಿನಲ್ಲಿ ದಾನ

ಪತ್ರದ ಮೂಲಕ ಹಾಗೂ ತನ್ನ ಹೆಸರಿನಲ್ಲಿ ವಿಲ್ ಮೂಲಕ ಗಳಿಸಿರುವುದರಿಂದ ಕೆಸಿಎಸ್‌ಆರ್ (ನಡತೆ) ನಿಯಮ 14 ಉಲ್ಲಂಘನೆಯಾಗಿರುವುದಿಲ್ಲ. ಅದೇ ಮುಖ್ಯ ಪ್ಯಾರಾದ ಕ್ರಮ ಸಂಖ್ಯೆ 9, 18, 20 ರಲ್ಲಿ ನಮೂದಿಸಿದ ಸ್ವತ್ತುಗಳನ್ನು ತಾನು ಡಿ ದರ್ಜೆಯ ನೌಕರನಾಗಿರುವುದರಿಂದ ನಿಗದಿತ ಪ್ರಾಧಿಕಾರಕ್ಕೆ ವರದಿಸುವುದನ್ನು ನಿಯಮ 23(5)ರ ಪ್ರಕಾರ ವಿನಾಯಿತಿಗೊಳಿಸಲಾಗಿದೆ. ಕ್ರಮ ಸಂಖ್ಯೆ 21 ರಲ್ಲಿ ನಮೂದಿಸಿದಂತೆ ಬ್ಯಾಂಕಿನಿಂದ ಸಾಲವನ್ನು ನಡತೆ ನಿಯಮ 21(4) ಪ್ರಕಾರ ಪಡೆದುಕೊಳ್ಳಬಹುದಾಗಿರುತ್ತದೆ.

ಮುಖ್ಯ ಪ್ಯಾರಾ 23 ರ ಕ್ರಮ ಸಂಖ್ಯೆ: 14 ರಿಂದ 19 ರಲ್ಲಿ ನಮೂದಿಸಿದ ವ್ಯವಹರಣೆಗಳನ್ನು ನಡತೆ ನಿಯಮ 21 (1) ರ ಪ್ರಕಾರ ಮಾಡಬಹುದಾಗಿರುತ್ತದೆ. ಅದೇ ಪ್ಯಾರಾದ ಕ್ರಮ ಸಂಖ್ಯೆ 20, 21, 22, 23ರಲ್ಲಿ ನಮೂದಿಸಿದ ವ್ಯವಹರಣೆಗಳನ್ನು (ನಡತೆ) ನಿಯಮ 23 (5) ರ ಪ್ರಕಾರ ಡಿ ದರ್ಜೆ ನೌಕರರು ಆಸ್ತಿ ಮತ್ತು ದಾಯಿತ್ವ ಪಟ್ಟಿ ಸಲ್ಲಿಸುರುವುದರಿಂದ ವಿನಾಯಿತಿ ಇದೆ. ಕ್ರಮ ಸಂಖ್ಯೆ 29, 30 ರಲ್ಲಿ ನಮೂದಿಸಿದ ಹಣವನ್ನು ಮಕ್ಕಳ ವಿದ್ಯಾಭ್ಯಾಸಕ್ಕೆ ಖರ್ಚು ಮಾಡಿದ್ದು ಸದರಿ ವ್ಯವಹರಣೆಯು (ನಡತೆ) ನಿಯಮ 21 (1) ರ ಪ್ರಕಾರ ಉಲ್ಲಂಘನೆಯಾಗುವುದಿಲ್ಲ.

ಮುಖ್ಯ ಪ್ಯಾರಾ 24 ರ ಕ್ರಮ ಸಂಖ್ಯೆ 3 ರಿಂದ 7 ರಲ್ಲಿ ನಮೂದಿಸಿದ ಆದಾಯವನ್ನು ತಾನು ಡಿ ದರ್ಜೆ ನೌಕರನಾಗಿರುವುದರಿಂದ (ನಡತೆ) ನಿಯಮ 23 (3ಎ) ಅನ್ವಯ ನಿಗದಿತ ಪ್ರಾಧಿಕಾರಕ್ಕೆ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಕ್ರಮ ಸಂಖ್ಯೆ 17, 18, 19 ರಲ್ಲಿ ನಮೂದಿಸಿದ ಸಾಲವನ್ನು ಬ್ಯಾಂಕಿನಿಂದ ಪಡೆದುಕೊಂಡಿದ್ದು, (ನಡತೆ) ನಿಯಮ 21 (4) ಅನ್ವಯ ನಿಗದಿತ ಪ್ರಾಧಿಕಾರದಿಂದ ಪೂರ್ವ ಮಂಜೂರಾತಿ ಪಡೆದುಕೊಳ್ಳುವುದು ವಿನಾಯಿತಿ ಇರುತ್ತದೆ. ಕ್ರಮ ಸಂಖ್ಯೆ 8 ಮತ್ತು 21 ರಲ್ಲಿ ನಮೂದಿಸಿದ ಆದಾಯವನ್ನು ನಿಗದಿತ ಪ್ರಾಧಿಕಾರಕ್ಕೆ ತಿಳಿಸದೆ ಇರುವುದನ್ನು ಒಪ್ಪಿಕೊಂಡಿರುತ್ತಾರೆ. ತಾನು ಬಲ್ಲ ಮೂಲಗಳಿಗಿಂತ ಹೆಚ್ಚಿಗೆ ಆಸ್ತಿಯನ್ನು ಹೊಂದಿರುವುದಿಲ್ಲ. ತಾನು ಕೊನೆಯಾದಾಗಿ 21/10/2016 ರಂದು ಆಸ್ತಿಯನ್ನು ಅರ್ಜಿಸಿದ್ದು ಸದರಿ ದಿನಾಂಕದಿಂದ 5 ವರ್ಷಗಳು ಗತಿಸಿರುವುದರಿಂದ ತನ್ನ ಮೇಲೆ ಕ್ರಮ ಜರುಗಿಸಿರುವುದು ಲೋಕಾಯುಕ್ತ ಕಾಯ್ದೆ 8 (2) (ಡಿ) ಇದರ ಉಲ್ಲಂಘನೆಯಾಗಿರುತ್ತದೆ. ಈ ಕುರಿತಂತೆ ಕೆಎಟಿ ಅರ್ಜಿ ಸಂಖ್ಯೆ 406/2014 ರಲ್ಲಿ ಆದ ತೀರ್ಪಿನ ಪ್ರತಿಯನ್ನು ಲಗತ್ತಿಸಿರುತ್ತಾರೆ ಮತ್ತು ತನ್ನ ಮೇಲಿನ ಪ್ರಕರಣವನ್ನು ಕೈಬಿಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

10. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಪ್ರಮುಖವಾಗಿ ಲೋಕಾಯುಕ್ತ ಕಾಯ್ದೆ ಕಲಂ 8 ರಲ್ಲಿ ಹೇಳಿದ 5 ವರ್ಷದ ಕಾಲಮಿತಿ ಮುಕ್ತಾಯವಾದ ಪ್ರಯುಕ್ತ ತನ್ನ ವಿರುದ್ಧ ತನಿಖೆ ನಡೆಸಲು ಬರುವುದಿಲ್ಲವೆಂದು ನಿವೇದಿಸಿಕೊಂಡಿರುತ್ತಾರೆ. ಲೋಕಾಯುಕ್ತ ಕಾಯ್ದೆ ಕಲಂ 8 ರಲ್ಲಿ ನಿಗದಿಪಡಿಸಿದ ಕಾಲಮಿತಿಯು ದೂರುದಾರರಿಗೆ ಅನ್ವಯ ಆಗುತ್ತದೆಯೇ ಹೊರತು, ಸ್ವಯಂಪ್ರೇರಿತವಾಗಿ ದೂರನ್ನು ದಾಖಲಿಸಿಕೊಂಡು ತನಿಖೆ ನಡೆಸಲು ಈ ಪ್ರಾಧಿಕಾರಕ್ಕೆ ಯಾವುದೇ ಕಾಲಮಿತಿಯ ಬಾದಾ ಇರುವುದಿಲ್ಲ. ಎಸಿಬಿ ರಚನೆಯಾದ ನಂತರ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 13986/2016 ದಾಖಲಾಗಿದ್ದು, ಸದರಿ ಅರ್ಜಿಯಲ್ಲಿ ಏಲಿ ಕಡೆಗೆ ಆದ ಆದೇಶದ ಅನ್ವಯ ದೋಷಾರೋಪಣಾ ಪಟ್ಟಿಯ ಪ್ರತಿಗಳನ್ನು ಈ ಪ್ರಾಧಿಕಾರಕ್ಕೆ ಏಲಿ ಕಡೆಗೆ ಸಲ್ಲಿಸಿರುವುದರಿಂದ ಈ ಪ್ರಕರಣಕ್ಕೆ ಲಿಮಿಟೇಷನ್ ಬಾದಾ ಇರುವುದಿಲ್ಲ. ಅಲ್ಲದೆ ಸರ್ವೋಚ್ಛ ನ್ಯಾಯಾಲಯವು ಕೋವಿಡ್-19 ಸಾಂಕ್ರಾಮಿಕ ಕಾಯಿಲೆಯಿಂದಾಗಿ ದಿ:

15/03/2020 ರಿಂದ 28/02/2022 ರ ವರೆಗಿನ ಅವಧಿಯನ್ನು, ಕಾಲಮಿತಿ ಲೆಕ್ಕ ಹಾಕುವಾಗ ವ್ಯವಕಲನ ಮಾಡಲು (In Re Cognizance for Extension of Limitation) ಆದೇಶಿಸಿರುವುದರಿಂದಲೂ ಪ್ರಸ್ತುತ ಪ್ರಕರಣಕ್ಕೆ ಕಾಲಮಿತಿಯ ಬಾದಾ ಇರುವುದಿಲ್ಲ. ಎದುರುದಾರರು ತಮ್ಮ ಸಮಾಜಾಯಿಷಿಯಲ್ಲಿ ತೆಗೆದುಕೊಂಡ ನಿಲುಮವನ್ನು ಒಪ್ಪಲು ಈ ಹಂತದಲ್ಲಿ ಸಮಂಜಸವಾದ ಆಧಾರಗಳು ಇರುವುದಿಲ್ಲ.

11. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆ ಹಾಗೂ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿ ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ದೆಯನ್ನು ಹೊಂದಿರದೇ, ತಮ್ಮ ಬಲ್ಲ ಮೂಲಗಳಿಗಿಂತ ಹೆಚ್ಚಿನ ಆಸ್ತಿಯನ್ನು ಸಂಪಾದಿಸಿ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1)(i) ರಿಂದ (iv) ನ್ನು ಉಲ್ಲಂಘಿಸಿ, ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಎದುರುದಾರರು ಶಿಸ್ತು ಕ್ರಮಕ್ಕೆ ಒಳಪಡಲು ಬಾಧ್ಯರಾಗಿರುತ್ತಾರೆ.

12. ಆದ್ದರಿಂದ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು, ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957, ನಿಯಮ 14(ಎ) ಅಡಿಯಲ್ಲಿ ಅನುಮತಿಸಿ, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರಲ್ಲಿ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸ್ಸು ಮಾಡುಲಾಗಿದೆ. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು (3) ತಿಂಗಳ ಒಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

K.N. Phanindra 26/4/22

(ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ)
ಗೌರವಾನ್ವಿತ ಉಪಲೋಕಾಯುಕ್ತರು-2
ಕರ್ನಾಟಕ ರಾಜ್ಯ, ಬೆಂಗಳೂರು.